# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿ.ಇ/689/2017//ಎಆರ್ಇ-10.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 19/03/2022.

## ವಿಚಾರಣಾ ವರದಿ

ಉಪಸ್ಥಿತರು: **ಜಿ. ನಂಜುಂಡಯ್ಯ,** ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ವಿಷಯ: **ಆಪಾದಿತ ಸರ್ಕಾರಿ ನೌಕರ-1 ಶ್ರೀ ಮಲ್ಲಿಕಾರ್ಜುನಪ್ಪ,** ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, **ಆಪಾದಿತ ಸರ್ಕಾರಿ ನೌಕರ-2 ಶ್ರೀ ಕರಿಯಪ್ಪ,** ತಾಲ್ಲೂಕು ಸರ್ವೆಯರ್, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ಮತ್ತು **ಆಪಾದಿತ ಸರ್ಕಾರಿ ನೌಕರ-3 ಶ್ರೀ ಚಂದ್ರಪ್ಪ,** ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರುಗಳ ವಿರುದ್ಧದ ಇಲಾಖಾ ವಿಚಾರಣೆಯ ಕುರಿತು.

ಉಲ್ಲೇಖ:
1. **ಕಂಪ್ಲೆಂಟ್/ಉಪಲೋಕ್/ಬಿಡಿ/1953, 1952 ಮತ್ತು 1954/ 2016/ಡಿಆರ್ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 02/03/2017.**
2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 78 ಎಡಿಇ 2017, ಬೆಂಗಳೂರು, ದಿನಾಂಕ: 09/05/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ-689/2017, ಬೆಂಗಳೂರು ದಿನಾಂಕ: 24/05/2017.

* * * *

1) ಸದರಿ ವಿಚಾರಣೆಗೆ ಸಂಬಂಧಿಸಿದಂತೆ, **ದೂರುದಾರರಾದ ಶ್ರೀ. ಎಂ.ಎಸ್. ಜಗದೀಶಯ್ಯ** ಬಿನ್ ಸಿದ್ದಬಸಯ್ಯ, ಮಧುರೆ ಗ್ರಾಮ ಮತ್ತು ಅಂಚೆ, ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರು **ಆಪಾದಿತ ಸರ್ಕಾರಿ ನೌಕರ-1 ಶ್ರೀ ಮಲ್ಲಿಕಾರ್ಜುನಪ್ಪ,** ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, **ಆಪಾದಿತ ಸರ್ಕಾರಿ ನೌಕರ-2 ಶ್ರೀ ಕರಿಯಪ್ಪ,** ತಾಲ್ಲೂಕು ಸರ್ವೆಯರ್, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ಮತ್ತು **ಆಪಾದಿತ ಸರ್ಕಾರಿ**

**ನೌಕರ–3 ಶ್ರೀ ಚಂದ್ರಪ್ಪ,** ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರುಗಳ ವಿರುದ್ಧ ದೂರು ಸಲ್ಲಿಸಿ ಮಧುರೆ ಗ್ರಾಮದ ರಿ.ಸ.ನಂ. 63 ವಿಸ್ತೀರ್ಣ 5 ಗುಂಟೆ ಜಮೀನು ಸರ್ಕಾರಿ ಬಂಜರು ಜಮೀನಾಗಿದ್ದು, ದಿನಾಂಕ 06.09.2014 ರಲ್ಲಿ ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿ ಸರ್ಕಾರಿ ಬಂಜರು ಜಮೀನು ಅತಿಕ್ರಮಣವಾಗಿದೆ ಅದನ್ನು ತೆರವುಗೊಳಿಸುವಂತೆ ಅರ್ಜಿ ಕೊಡಲಾಗಿತ್ತು, ಈ ಅರ್ಜಿಯ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ದಿನಾಂಕ 29.02.2016 ರಂದು ರಾಜಸ್ವ ನಿರೀಕ್ಷಕರು ಸ್ಥಳಕ್ಕೆ ಭೇಟಿ ನೀಡಿ ಅತಿಕ್ರಮದಾರರನ್ನು ಕರೆಸಿ ಜಮೀನು ತೆರವುಗೊಳಿಸುವಂತೆ ಹೇಳಿ ನನ್ನ ಸಹಿ ತೆಗೆದುಕೊಂಡು ಹೋದರು. ದಿನಾಂಕ 22.03.2016 ರ ವರದಿಯಲ್ಲಿ ಒತ್ತುವರಿ ಖುಲ್ಲಾ ಮಾಡಿರುವುದಾಗಿ ಹೇಳಿದ್ದಾರೆ ಆದರೆ, ತಾಲ್ಲೂಕು ಕಛೇರಿಗೆ ಸುಳ್ಳು ವರದಿಯನ್ನು ಕೊಟ್ಟಿದ್ದಾರೆ. ರಾಜಸ್ವ ನಿರೀಕ್ಷಕರು ಸುಳ್ಳು ವರದಿ ಸಲ್ಲಿಸಿರುವುದರಿಂದ ತಹಶೀಲ್ದಾರ್ ರವರಿಗೆ ಸ್ಥಳ ಪರಿಶೀಲನೆ ಮಾಡಲು ಕೋರಿಕೊಂಡಾಗತಹಶೀಲ್ದಾರ್ ರವರು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಎಷ್ಟೇ ಅರ್ಜಿ ಬರೆದರೂ ಸಹ ಅವುಗಳ ಮೇಲೆಕ್ರಮ ಕೈಗೊಂಡಿಲ್ಲವೆಂದು ದಿನಾಂಕ 13/04/2016, 18/05/2016 ಮತ್ತು 01/06/2016 ರಂದು ಅರ್ಜಿ ಕೊಟ್ಟರೂ ಸಹ ಅವುಗಳ ಮೇಲೆ ಕ್ರಮಕೈಗೊಂಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು, ರಾಜ್ಯ ಪಾಲರಿಗೆ, ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದರೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ, 5 ಗುಂಟೆ ಪ್ರದೇಶವನ್ನು ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಡಲು ಕೋರಿಕೊಂಡಿರುತ್ತಾರೆ.

2) 1 ಮತ್ತು 3 ನೇ ಎದುರುದಾರರು ಖುದ್ದು ಹಾಜರಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ದಿನಾಂಕ 13.09.2016 ರಂದು ರಾಜಸ್ವ ನಿರೀಕ್ಷಕರು, ತಾಲ್ಲೂಕು ಸರ್ವೆಯರ್ ಮತ್ತು ಗ್ರಾಮಲೆಕ್ಕಿಗರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಮಾಡಲಾಗಿ ಆ ಜಮೀನಿನಲ್ಲಿ ಶಾಂತಕುಮಾರ್ ಬಿನ್ ಬೈರಪ್ಪ ಎನ್ನುವವರು ಜಾನುವಾರುಗಳ ಮೇವಿನ ಬಣವೆ ಹಾಗೂ ತಿಪ್ಪೆಗೊಬ್ಬರದ ಸಂಗ್ರಹಣೆ ಮಾಡಿ ಸುತ್ತಲೂ ತಂತಿಬೇಲಿ ಹಾಕಿಕೊಂಡಿರುತ್ತಾರೆ. ಸ್ಥಳದಲ್ಲಿ ಖುದ್ದುನಿಂತು ದೂರುದಾರರಮನವಿಯಂತೆ ಅವರ ಸಮಕ್ಷಮದಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆ. ಇದಲ್ಲದೆ ಸದರಿ ಸ್ಥಳವು ಸರ್ಕಾರಕ್ಕೆ ಸೇರಿದ್ದು ಅತಿಕ್ರಮಣ ಪ್ರವೇಶ ಮಾಡಿರುವವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ನಮೂದಿಸಿದ್ದಾರೆ.

3) ಸದರಿ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಇಷ್ಟೆಲ್ಲಾ ಅರ್ಜಿಗಳನ್ನು ಸಲ್ಲಿಸಿದರೂ ಜಿಲ್ಲಾಧಿಕಾರಿಗಳು, ಮುಖ್ಯ ಮಂತ್ರಿಗಳು, ರಾಜ್ಯಪಾಲರು ಪತ್ರಗಳನ್ನು ಬರೆದಿದ್ದರೂ ಸಹ ಗಮನಕ್ಕೆ ತೆರೆದುಕೊಂಡಿರಲಿಲ್ಲ, ಈ ಹಿಂದೆ ಖುಲ್ಲಾ ಪಡಿಸಿರುವುದಾಗಿ ಸುಳ್ಳು ವರದಿ ಸಲ್ಲಿಸಿರುತ್ತಾರೆ. ದಾಖಲೆಗಳ

ಪರಿಶೀಲನೆಯ ನಂತರ ಆ.ಸ.ನೌ.–1 ರಿಂದ 3 ರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966 ಕಲಂ 3(1)(i) ರಿಂದ (iii) ರಡಿಯಲ್ಲಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 09/05/2017 ರಂದು ಮಾನ್ಯ ಉಪಲೋಕಾಯುಕ್ತ–2 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ–2 ರವರು ದಿನಾಂಕ 24/05/2017 ರಂದು ಅಪರ ನಿಬಂಧಕರು, ವಿಚಾರಣೆಗಳ–10 ರವರಿಗೆ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ನಾಮನಿರ್ದೇಶನ ಮಾಡಿರುತ್ತಾರೆ.

4) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ–1 ರಿಂದ 3 ರವರುಗಳ ವಿರುದ್ಧ ದೋಷಾರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು–10 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು **ಆ.ಸ.ನೌ–1 ರಿಂದ 3** ರವರುಗಳಿಗೆ ದಿನಾಂಕ 18/08/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ***ಅನುಬಂಧ–1***
## ***ದೋಷಾರೋಪಣೆ–1***

1ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಮಲ್ಲಿಕಾರ್ಜುನಪ್ಪ, ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, 2ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಕರಿಯಪ್ಪ, ತಾಲ್ಲೂಕು ಸರ್ವೆಯರ್, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ಮತ್ತು 3ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಚಂದ್ರಪ್ಪ, ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ ಆದ ನೀವು ;

ಮಧುರೆ ಗ್ರಾಮದ ರಿ.ಸ. ನಂ: 63 ವಿಸ್ತೀರ್ಣ 5ಗುಂಟೆ ಸರ್ಕಾರಿ ಜಮೀನಾಗಿದ್ದು, ಅತಿಕ್ರಮಣವಾಗಿದೆ. ದಿನಾಂಕ: 6.9.2014ರಲ್ಲಿ ತಹಶೀಲ್ದಾರ್‌ರವರಿಗೆ ಸದರಿ ಜಾಗವನ್ನು ತೆರವುಗೊಳಿಸುವಂತೆ ಅರ್ಜಿಯನ್ನು

ಲ್ಲ.1/3

ಕೊಡಲಾಗಿತ್ತು. ಆದರೆ 1 ವರ್ಷ 4 ತಿಂಗಳವರೆವಿಗೂ ಆಪಾದಿತ ಸರ್ಕಾರಿ ನೌಕರರಾದ ನೀವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದಿನಾಂಕ : 22.3.2016ರಂದು 3ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಜಮೀನು ಖುಲ್ಲಾ ಪಡಿಸಲಾಗಿದೆ ಎಂದು ಸುಳ್ಳು ವರದಿಯನ್ನು ನೀಡಿರುತ್ತೀರಿ. ಆಪಾದಿತ ಸರ್ಕಾರಿ ನೌಕರರು ದಿ: 13.9.2016ರಂದು ಆರ್.ಐ ಮತ್ತು ತಾಲ್ಲೂಕು ಸರ್ವೆಯರ್, ವಿ.ಎ., ರವರು ಸರ್ಕಾರಿ ಬಂಜರು ಜಮೀನಿಗೆ ಹೋಗಿ ತನಿಖೆ ಮಾಡಿದಾಗ ಜಾನುವಾರುಗಳ ಮೇವಿನ ಬಣವೆ ಹಾಗೂ ತಿಪ್ಪೆ ಗೊಬ್ಬರದ ಸಂಗ್ರಹಣೆ ಮಾಡಿ ಸುತ್ತಲು ತಂತಿಬೇಲಿಹಾಕಿರುವುದು ಕಂಡುಬಂದಿದೆ. ದಿನಾಂಕ : 22.3.2016ರ 3ನೇ ಆಪಾದಿತ ಸರ್ಕಾರಿ ನೌಕರರ ವರದಿ ಸುಳ್ಳು ಆಗಿದೆ. ಜಮೀನನ್ನು ಸರ್ವೆ ಅಧಿಕಾರಿಗಳಾಗಲಿ ತಹಶೀಲ್ದಾರ್‌ರವರಾಗಲಿ ಬಹಳ ಹಿಂದೆಯೇ ಬಾಂದುಗಳು ನಾಶವಾಗಿದೆ ಅಂತ ತಿಳಿಸಿದ್ದು, ಬಾಂದು ಕಲ್ಲುಗಳನ್ನು ಕಿತ್ತು ಹಾಕಿದವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಒತ್ತುವರಿದಾರರನ್ನು ತೆರವುಗೊಳಿಸಿದ ನಂತರವೂ ಸಹ ಇಷ್ಟು ವರ್ಷ ಸರ್ಕಾರಿ ಜಮೀನನ್ನು ಸ್ವಂತಕ್ಕೆ ಬಳಸಿಕೊಂಡಿರುವ ಬಗ್ಗೆ ಯಾವುದೇ ಕ್ರಮಗಳನ್ನು ಆಪಾದಿತ ಸರ್ಕಾರಿ ನೌಕರರಾದ ನೀವು ತೆಗೆದುಕೊಂಡಿರುವುದಿಲ್ಲ.

ಆದಕಾರಣ 1ರಿಂದ 3ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

***ಅನುಬಂಧ-2***

**ದೋಷಾರೋಪಣೆಯ ವಿವರ**

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

(1) ಈ ದೂರನ್ನು ಶ್ರೀ.ಎಂ.ಎಸ್.ಜಗದೀಶಯ್ಯ, ಬಿನ್ ಸಿದ್ದಬಸಯ್ಯ, ಮಧುರೆ ಗ್ರಾಮ ಮತ್ತು ಅಂಚೆ, ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ ( ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ಮಲ್ಲಿಕಾರ್ಜುನಪ್ಪ, ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (2) ಶ್ರೀ.ಕರಿಯಪ್ಪ, ತಾಲ್ಲೂಕು ಸರ್ವೆಯರ್, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ (3) ಶ್ರೀ.ಚಂದ್ರಪ್ಪ, ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಸಲ್ಲಿಸಿದ್ದಾರೆ.

(2) ದೂರುದಾರರು ತಮ್ಮ ದೂರಿನಲ್ಲಿ ಮಧುರೆ ಗ್ರಾಮದ ರಿ.ಸ. ನಂ: 63 ವಿಸ್ತೀರ್ಣ 5ಗು., ಜಮೀನು ಸರ್ಕಾರಿ ಬಂಜರು ಜಮೀನಾಗಿದೆ. ದಿ: 6.9.2014ರಲ್ಲಿ ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿ ಸರ್ಕಾರಿ ಬಂಜರು ಜಮೀನು ಅತಿಕ್ರಮಣವಾಗಿದೆ ಅದನ್ನು ತೆರವುಗೊಳಿಸುವಂತೆ ಅರ್ಜಿ ಕೊಡಲಾಗಿತ್ತು ಈ ಅರ್ಜಿಯ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ ದಿ: 29.2.2016ರಂದು ಆರ್.ಐ ರವರು ಸ್ಥಳಕ್ಕೆ ಭೇಟಿ ನೀಡಿ ಅತಿಕ್ರಮದಾರರನ್ನು ಕರೆಸಿ ಜಮೀನು ತೆರವುಗೊಳಿಸುವಂತೆ ಹೇಳಿದರು ತನ್ನ ಸಹಿ ತೆಗೆದುಕೊಂಡು ಹೊದರು ದಿ: 22.3.2016ರ ವರದಿಯಲ್ಲಿ ಒತ್ತುವರಿ ಖುಲ್ಲಾ ಮಾಡಿರುವುದಾಗಿ ಹೇಳಿದ್ದಾರೆ. ಆದರೆ ತಾಲ್ಲೂಕು ಕಛೇರಿಗೆ ಸುಳ್ಳು ವರದಿಯನ್ನು ಕೊಟ್ಟಿದ್ದಾರೆ. ಆರ್.ಐ., ಸುಳ್ಳು ವರದಿ ಸಲ್ಲಿಸಿರುವುದರಿಂದ ತಹಶೀಲ್ದಾರ್ ರವರಿಗೆ ಸ್ಥಳ ಪರಿಶೀಲನೆ ಮಾಡಲು ಕೋರಿಕೊಂಡಾಗ ತಹಶೀಲ್ದಾರ್ ರವರು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಎಷ್ಟೇ ಅರ್ಜಿ ಬರೆದರೂ ಸಹ ಅವುಗಳ ಮೇಲೆ ಕ್ರಮ ಕೈಗೊಂಡಿಲ್ಲ ದಿ: 13.4.2016, 18.5.2016, 1.6.2016 ರಂದು ಅರ್ಜಿ ಕೊಟ್ಟರೂ ಸಹ ಕ್ರಮ ತೆಗೆದುಕೊಂಡಿಲ್ಲ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯ ಪಾಲರಿಗೆ, ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದರೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಆದ್ದರಿಂದ 5ಗು., ಪ್ರದೇಶವನ್ನು ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಡಲು ಕೋರಿಕೊಂಡಿರುತ್ತಾರೆ. ಆಪಾದಿತ ಸರ್ಕಾರಿ ನೌಕರರಿಗೆ ನೋಟೀಸು ಕೊಟ್ಟು ಕ್ರಮ ತೆಗದುಕೊಂಡ ಬಗ್ಗೆ ವರದಿ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ.

(3) 1 ಮತ್ತು 3ನೇ ಆಪಾದಿತ ಸರ್ಕಾರಿ ನೌಕರರು ಖುದ್ದು ಹಾಜರಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ದಿ: 13.9.2016ರಂದು ಆರ್.ಐ., ತಾಲ್ಲೂಕು ಸರ್ವೆಯರ್ ಮತ್ತು ವಿ.ಎ., ರವರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಮಾಡಲಾಗಿ ಆ ಜಮೀನಿನಲ್ಲಿ ಶಂತಕುಮಾರ್ ಬಿನ್ ಬೈರಪ್ಪ ಎನ್ನುವವರು ಜಾನುವಾರುಗಳ ಮೇವಿನ ಬಣವೆ ಹಾಗೂ ತಿಪ್ಪೆಗೊಬ್ಬರದ ಸಂಗ್ರಹಣೆ ಮಾಡಿ ಸುತ್ತಲು ತಂತಿಬೇಲಿ ಹಾಕಿಕೊಂಡಿರುತ್ತಾರೆ. ಸ್ಥಳದಲ್ಲಿ ಖುದ್ದು ನಿಂತು ದೂರುದಾರರ ಮನವಿಯಂತೆ ಅವರ ಸಮಕ್ಷಮದಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆ. ಇದಲ್ಲದೆ ಸದರಿ ಸ್ಥಳವು ಸರ್ಕಾರಕ್ಕೆ ಸೇರಿದ್ದು ಅತಿಕ್ರಮಣ ಪ್ರವೇಶ

ಮಾಡಿರುವವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ನಮೂದಿಸಿದ್ದಾರೆ. ಇದೇ 5 ಗು., ಯಲ್ಲಿ ಸಾರ್ವಜನಿಕರು ಓಡಾಡುವ ರೂಢಿಗತ ಬಂಡಿದಾರಿ, ಗ್ರಾಮ ಪಂಚಾಯ್ತಿಯ ಕೊಳವೆ ಬಾವಿ, ಕೈಪೊಂಪು ಇಂಗು ಗುಂಡಿ, ಬೆಸ್ಕಾಂನ ಟಿ.ಸಿ., ಮತ್ತು ಜಾನುವಾರುಗಳ ಕುಡಿಯುವ ನೀರಿನ ತೊಟ್ಟಿ ಇರುತ್ತದೆ. ಈ ಪ್ರದೇಶದಲ್ಲಿ ಬಾಂಡುಗಳು ಬಹಳ ಹಿಂದೆಯೇ ನಾಶವಾಗಿದ್ದು ಇತ್ತೀಚೀನ ದಿನಗಳಲ್ಲಿ ಬಾಂಡುಗಳು ನಾಶವಾಗಿರುವುದಿಲ್ಲ. ದೂರುದಾರರು ನಿಯಮಾನುಸಾರ ಸರ್ವೆ ಇಲಾಖೆಗೆ ಅರ್ಜಿ ಸಲ್ಲಿಸಿ ಶುಲ್ಕ ಭರಿಸಿದಲ್ಲಿ ಅವರ ಜಮೀನಿನ ಹದ್ದುಬಸ್ತು ಮಾಡಿಕೊಡಲಾಗುವುದು ಅತಿಕ್ರಮಣದಾರರ ಪರವಾಗಿ ಅಥವಾ ದೂರುದಾರರ ವಿರುದ್ದ ಯಾವುದೇ ವರದಿ ಕೊಟ್ಟಿಲ್ಲ ಆದ್ದರಿಂದ ದೂರನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

(4) ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಇಷ್ಟೆಲ್ಲಾ ಅರ್ಜಿಗಳನ್ನು ಸಲ್ಲಿಸಿದರೂ ಜಿಲ್ಲಾಧಿಕಾರಿಗಳು ಮುಖ್ಯ ಮಂತ್ರಿಗಳು, ರಾಜ್ಯಪಾಲರು ಪತ್ರಗಳನ್ನು ಬರೆದಿದ್ದರೂ ಸಹ ಗಮನಕ್ಕೆ ತೆಗೆದುಕೊಂಡಿರಲಿಲ್ಲ ಈ ಹಿಂದೆ ಖುಲ್ಲಾ ಪಡಿಸಿರುವುದಾಗಿ ಸುಳ್ಳು ವರದಿ ಸಲ್ಲಿಸಿದ್ದಾರೆ. ಸರ್ವೆಯರ್ ರವರು ತಮ್ಮ ಬುದ್ದಿವಂತಿಕೆ ಉಪಯೋಗಿಸಿ ಆ ಜಾಗದಲ್ಲಿ ಅದು ಇದು ಇರುತ್ತದೆ ಅಂತ ತೋರಿಸಿದ್ದಾರೆ. ಕಲ್ಲನ್ನು ನಡೆಸಿ ಸ್ಥಳ ಗುರುತಿಸಿಲ್ಲ ಅತಿಕ್ರಮಣದಾರರಾದ ಶ್ರೀ. ಶಂತಕುಮಾರ್ ಬಿನ್ ಬೈರಯ್ಯ ಇವರಿಗೆ ಅಧಿಕಾರಿಗಳ ಬೆಂಬಲ ಇದೆ. ಆದ್ದರಿಂದ ತನ್ನ ಜಮೀನಿನ ಉತ್ತರಕ್ಕೆ ಇರುವ ಕಲ್ಲನ್ನು ಕೀಳುವುದು ಬದುವನ್ನು ನಾಶ ಮಾಡುವುದು ಮುಂತಾಗಿ ತೊಂದರೆ ಕೊಡುತ್ತಿದ್ದನ್ನು ತಹಶೀಲ್ದಾರ್ ರವರಿಗೆ ಅಧಿಕಾರ ಇರುವುದರಿಂದ ಸ. ನಂ: 63ಅನ್ನು ಸದರಿಯವರಿಗೆ ಕೊಡಬಬಹುದು ತಹಶೀಲ್ದಾರ್ ರವರು ಯಾವುದೇ ನೆಲ ಬಾಡಿಗೆಯನ್ನು ವಸೂಲಿ ಮಾಡಿಲ್ಲ ದಂಡ ಹಾಕಿಲ್ಲ. ಅಕ್ರಮಣಕಾರರನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು ಆದ್ದರಿಂದ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿದ್ದಾರೆ.

(5) ದಿ: 6.9.2014ರಂದು ಸಲ್ಲಿಸಿರುವ ಅರ್ಜಿಯ ಮೇಲೆ 1 ವರ್ಷ 4 ತಿಂಗಳ ನಂತರ ತಡವಾಗಿ ಕ್ರಮ ವಹಿಸಲಾಗಿದೆ ಅಂತ ಕಂಡುಬಂದರೂ ಸಹ ಇಷ್ಟು ತಡವಾಗಿ ಏಕೆ ಕ್ರಮ ತೆಗೆದುಕೊಂಡರೂ ಎನ್ನುವ ಬಗ್ಗೆ ಯಾವುದೇ ವಿವರಣೆಗಳಲಿಲ್ಲ 2ನೇದಾಗಿ ದಿ: 22.3.2016ರಂದು ಜಮೀನನ್ನು ಖುಲ್ಲಾ ಪಡಿಸಲಾಗಿದೆ ಅಂತ ಆರ್.ಐ., ರವರು ವರದಿ ಸಲ್ಲಿಸಿದ್ದು ಸದರಿ ವರದಿಯೇ ಸುಳ್ಳು ಅಂತ ಕಂಡುಬರುತ್ತಿದ್ದು ಸಮಕ್ಷಮದಲ್ಲಿ ಆಪಾದಿತ ಸರ್ಕಾರಿ ನೌಕರರನ್ನು ಹಾಜರುಪಡಿಸಿಕೊಂಡಾಗ ಆಪಾದಿತ ಸರ್ಕಾರಿ ನೌಕರರು ದಿ: 13.9.2016ರಂದು ಆರ್.ಐ ಮತ್ತು ತಾಲ್ಲೂಕು ಸರ್ವೆಯರ್, ವಿ.ಎ., ರವರು ಸರ್ಕಾರಿ ಬಂಜರು ಜಮೀನಿಗೆ

ea 10/3

ಹೋಗಿ ತನಿಖೆ ಮಾಡಿದಾಗ ಜಾನುವಾರುಗಳ ಮೇವಿನ ಬಣವೆ ಹಾಗೂ ತಿಪ್ಪೆ ಗೊಬ್ಬರದ ಸಂಗ್ರಹಣೆ ಮಾಡಿ ಸುತ್ತಲು ತಂತಿಬೇಲಿಹಾಕಿರುವುದು ಕಂಡುಬಂದಿದೆ. ಹೀಗಿರುವಾಗ 22.3.2016ರಂದು ಒತ್ತುವರಿ ಖುಲ್ಲಾ ಮಾಡಿದರು ಎನ್ನುವ ಆರ್.ಐ ರವರ ವರದಿ ಸುಳ್ಳು ಇರುತ್ತದೆ. ಈ ಜಮೀನನ್ನು ದೂರುದಾರರೇ ಒತ್ತುವರಿ ಮಾಡಬಹುದು ಅಂತ ಆಪಾದಿತ ಸರ್ಕಾರಿ ನೌಕರರು ಸಂಶಯ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಪಂಚಾಯ್ತಿಯ ಕೊಳವೆ ಬಾವಿ, ಇಂಗು ಗುಂಡಿ, ಬಂಡಿ ದಾರಿಗಳು, ಬೆಸ್ಕಾಂನ ಟಿ.ಸಿ., ಕೈಪಂಪು ಜಾನುವಾರುಗಳು ಕುಡಿಯುವ ನೀರಿನ ತೊಟ್ಟಿ ಇವೆ ಅಂತ ದಾಖಲಿಸಿದ್ದಾರೆ. ದೂರುದಾರರಿಗೂ ಸಹ ಈ 5 ಗುಂಟೆ ಜಮೀನಿನ ಮೇಲೆ ಯಾವುದೇ ಹಕ್ಕು ಇಲ್ಲ ಅಂತ ಪರಿಗಣಿಸಬೇಕಾಗುತ್ತದೆ. ಸರ್ವೆ ಅಧಿಕಾರಿಗಳಾಗಲಿ ತಹಶೀಲ್ದಾರ್ ಆಗಲಿ ಬಹಳ ಹಿಂದೆಯೇ ಬಾಂದುಗಳು ನಾಶವಾಗಿದೆ ಅಂತ ಸರಳವಾಗಿ ವರದಿ ಕೊಡುತ್ತಾರೆ. ಆದರೆ ಕಾನೂನಿನಂತೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕಲಂ 147 ಕರ್ನಾಟಕ ಭೂ ಕಂದಾಯ ಅಧಿನಿಯಮದಲ್ಲಿ

> " Penalty for injuring boundary marks. (1) Any person willfully erasing, removing or injuring a boundary mark, or unauthorisedly constructing a boundary mark, shall, after a summary inquiry before the [Tahsildar], or before a survey officer holding a Gazetted rank, be liable to a fine not exceeding fifty rupees for each mark so erased, removed, injured or unauthorisedly constructed
>
> (2) The fine imposed under sub-section (1) shall be recovered as an arrear of land revenue and out of it an amount not exceeding one half may be awarded by the Officer imposing the fine to the informer, if any." ಅಂತ ವಿಧಿಸಲಾಗಿದೆ.

(6)ತಹಶೀಲ್ದಾರ್‌ರವರಾಗಲಿ ಅಥವಾ ಸರ್ವೆಯರ್‌ರವರಾಗಲಿ ಸಾರಾಂಶ ವಿಚಾರಣೆಯನ್ನು ಮಾಡಿ ಬಾಂದು ಕಲ್ಲುಗಳನ್ನು ಕಿತ್ತು ಹಾಕಿದವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆರ್.ಐ 22.3.2016ರ ವರದಿಯಲ್ಲಿ ತಾವು ಒತ್ತುವರಿಯನ್ನು ತೆರವುಗೊಳಿಸಿರುವುದಾಗಿ ಸುಳ್ಳು ವರದಿ ಸಲ್ಲಿಸಿದ್ದಾರೆ.

ಒತ್ತುವರಿದಾರರನ್ನು ತೆರವುಗೊಳಿಸಿದ ನಂತರವೂ ಸಹ ಇಷ್ಟು ವರ್ಷ ಸರ್ಕಾರಿ ಜಮೀನನ್ನು ಸ್ವಂತಕ್ಕೆ ಬಳಸಿಕೊಂಡಿರುವ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಅಂತ ಆಪಾದಿತ ಸರ್ಕಾರಿ ನೌಕರರು ವಿವರಿಸಿಲ್ಲ ಆದ್ದರಿಂದ ಆಪಾದಿತ ಸರ್ಕಾರಿ ನೌಕರರು ಕರ್ತವ್ಯಲೋಪವನ್ನು ಎಸಗಿದ್ದಾರೆನ್ನಲು ಸಾಕಷ್ಟು ಆಧಾರಗಳಿವೆ.

(7) ಆದುದರಿಂದ, 1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ 1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಶಿಸ್ತು ನಡವಳಿಕೆಯನ್ನು 1ರಿಂದ 3ನೇ ಆಪಾದಿತ ಸರ್ಕಾರಿ ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (2)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮಗಳ ವಿರುದ್ಧ ಈ ಮೇಲ್ಕಂಡಂತೆ ಆಪಾದನೆ.**

5) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌ–1 ರಿಂದ 3 ರವರುಗಳಿಗೆ ಕಳುಹಿಸಿದ್ದು, ಆ.ಸ.ನೌ–1 ರಿಂದ ರವರುಗಳಿಗೆ ದಿನಾಂಕ 26/082017 ರಂದ ಜಾರಿಯಾಗಿದ್ದು, ದಿನಾಂಕ 31/08/2017 ಈ ವಿಚಾರಣಾ ಪ್ರಾಧಿಕಾರದ ಮುಂದೆ ಆ.ಸ.ನೌ–1 ರಿಂದ 3 ರವರುಗಳು ಹಾಜರಾಗಿರುವುದಿಲ್ಲ ಅವರ ವಕೀಲರು ಹಾಜರಾಗಿ ವಕಾಲತ್ತು ಸಲ್ಲಿಸಿರುತ್ತಾರೆ. ದಿನಾಂಕ 28/10/2017 ರಂದು ಆ.ಸ.ನೌ–1 ರಿಂದ 3 ರವರುಗಳು ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗದಿದ್ದ ಕಾರಣ ಸದರಿಯವರುಗಳನ್ನು **ಏಕತರ್ಫಿ** ಎಂದು ಪರಿಗಣಿಸಲಾಗಿರುತ್ತದೆ. ದಿನಾಂಕ 14/12/2017, 12/02/2018 ಮತ್ತು 15/05/2018 ರಂದು ಸಹ ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಹಾಜರಾಗದಿದ್ದ ಕಾರಣ ಸದರಿಯವರುಗಳನ್ನು **ಏಕತರ್ಫಿ ಎಂದು ಪರಿಗಣಿಸಲಾಗಿರುತ್ತದೆ.** ಆ.ಸ.ನೌ–1 ರಿಂದ 3 ರವರ ವಕೀಲರು ಮಧ್ಯಂತರ ಅರ್ಜಿ ಸಲ್ಲಿಸಿ ಏಕತರ್ಫಿ ಆದೇಶವನ್ನು ರದ್ದುಗೊಳಿಸಲು ಕೋರಿದ್ದು,

ಏಕತರ್ಫಿಯನ್ನು ಆದೇಶವನ್ನು ವಜಾಗೊಳಿಸಲಾಗಿರುತ್ತದೆ. ನಂತರ ಸಿ.ಡಬ್ಲ್ಯೂ-1 ರವರ ಸಾಕ್ಷಿ ವಿಚಾರಣೆ ನಡೆಯುತ್ತಿದ್ದ ಪ್ರಯುಕ್ತ ಆ.ಸ.ನೌ-1 ರಿಂದ 3 ರವರುಗಳು ಪ್ರಥಮ ಮೌಖಿಕ ಹೇಳಿಕೆಯನ್ನು ಪಡೆದಿರುವುದಿಲ್ಲ.

6) ಆಪಾದಿತ ಸರ್ಕಾರಿ ನೌಕರ-1 ರಿಂದ 3 ರವರುಗಳ ವಕೀಲರು ದಿನಾಂಕ 15/06/2018 ರಂದು ಜ್ಞಾಪನವನ್ನು ಸಲ್ಲಿಸಿ ದಿನಾಂಕ 01/08/2016 ರಂದು ನೀಡಿರುವ ಜ್ಞಾಪನಕ್ಕೆ ಸಂಬಂಧಿಸಿದಂತೆ, ಆಪಾದಿತ ಸರ್ಕಾರಿ ನೌಕರ-1 ರವರು ದಿನಾಂಕ 19/09/2016 ರಂದು ಸಲ್ಲಿಸಿರುವ ಆಕ್ಷೇಪಣೆ, ಆಪಾದಿತ ಸರ್ಕಾರಿ ನೌಕರ-2 ರವರು ದಿನಾಂಕ 13/09/2016 ರಂದು ಸಲ್ಲಿಸಿರುವ ಆಕ್ಷೇಪಣೆ ಮತ್ತು ಆಪಾದಿತ ಸರ್ಕಾರಿ ನೌಕರ-3 ರವರು ದಿನಾಂಕ 15/09/2016 ರಂದು ಸಲ್ಲಿಸಿರುವ ಆಕ್ಷೇಪಣೆಯನ್ನೆ ರಕ್ಷಣಾ ಹೇಳಿಕೆಯನ್ನಾಗಿ ಪರಿಗಣಿಸಿಬೇಕೆಂದು ಕೋರಿರುತ್ತಾರೆ.

7) ಈ ವಿಚಾರಣೆಯಲ್ಲಿ, ಆ.ಸ.ನೌ-1 ರಿಂದ 3 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ ಜಗಧೀಶಯ್ಯ ಮಧುರೆ ಗ್ರಾಮ ಮತ್ತು ಅಂಚೆ, ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆರವರನ್ನು ಪಿ.ಡಬ್ಲ್ಯೂ-1 ಸಾಕ್ಷಿ ನುಡಿಸಿಕೊಂಡು **ನಿ.ಪಿ-1 ಮತ್ತು ನಿ.ಪಿ-12** ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ-1 ರಿಂದ 3 ರವರುಗಳು ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ಪಡೆದುಕೊಳ್ಳಲಾಗಿರುತ್ತದೆ.

7) ಆ.ಸ.ನೌ-1 ಶ್ರೀ ಮಲ್ಲಿಕಾರ್ಜುನ್, ತಹಶೀಲ್ದಾರ್ ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ-1** ಎಂದು, ಆ.ಸ.ನೌ-2 **ಶ್ರೀ ಟಿ. ಕರಿಯಪ್ಪ,** ತಾಲ್ಲೂಕು ಸರ್ವೆಯರ್ ರವರು ತಮ್ಮ ಪರವಾಗಿ ತಾವೆ **ಡಿ.ಡಬ್ಲ್ಯೂ-2** ಎಂದು ಮತ್ತು ಆ.ಸ.ನೌ-3 ಶ್ರೀ ಜಿ. ಚಂದ್ರಪ್ಪ, ರಾಜಸ್ವ ನಿರೀಕ್ಷಕರು, ತಮ್ಮ ಪರವಾಗಿ **ಡಿ.ಡಬ್ಲ್ಯೂ-3** ಎಂದು ವಿಚಾರಣೆ ಮಾಡಿಕೊಂಡು **ನಿ.ಡಿ-1 ರಿಂದ 4** ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

8) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳ ವಾದವಿವಾದವನ್ನು ಆಲಿಸಲಾಯಿತು.

9) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ರಿಂದ 3 ರವರುಗಳ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2**: ಆದೇಶವೇನು?

10) ವಾದವಿವಾದ ಆಲಿಸಿದ ನಂತರ ಕಡವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1) ಸಕಾರಾತ್ಮಕವಾಗಿ.**

**ಅಂಶ–2)** ಅಂತಿಮ ಆದೇಶದಂತೆ.

## <u>ಕಾರಣಗಳು</u>

12) **ಅಂಶ–1:** ಈ ವಿಚಾರಣೆಯಲ್ಲಿ, ಆ.ಸ.ನೌ–1 ರಿಂದ 3 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಜಗದೀಶಯ್ಯ, ಮಧುರೆ ಗ್ರಾಮ ಮತ್ತು ಅಂಚೆ, ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆರವರನ್ನು ಪಿ.ಡಬ್ಲ್ಯೂ–1 ಸಾಕ್ಷಿ ನುಡಿಸಿಕೊಂಡು **ನಿ.ಪಿ–1 ಮತ್ತು ನಿ.ಪಿ–12** ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

13) ದೂರುದಾರ ಪಿಡಬ್ಲ್ಯೂ–1 ಶ್ರೀ ಜಗದೀಶಯ್ಯನವರು ತಮ್ಮ ಮುಖ್ಯವಿಚಾರಣೆಯಲ್ಲಿ, 2014–15ನೇ ಸಾಲಿನಲ್ಲಿ ಆಪಾದಿತ ಸರ್ಕಾರಿ ನೌಕರ–1 ರವರು ತಹಶೀಲ್ದಾರ್ ಆಗಿ, ಆಪಾದಿತ ಸರ್ಕಾರಿನೌಕರ–2 ರವರು ತಾಲ್ಲೂಕು ಸರ್ವೆಯರ್ ಆಗಿ ಮತ್ತು ಆಪಾದಿತ ಸರ್ಕಾರಿ ನೌಕರ–3 ರವರು ರಾಜಸ್ವ ನಿರೀಕ್ಷಕರಾಗಿ ಹೊಸದುರ್ಗ ತಾಲ್ಲೂಕು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು ಮಧುರೆ ಗ್ರಾಮದ ರಿ. ಸರ್ವೆ ನಂ. 63 ರಲ್ಲಿ 5 ಗುಂಟೆ ಜಮೀನು ಸರ್ಕಾರಿ ಬಂಜರು

ಜಮೀನು ಇದ್ದು, ಸದರಿ ಜಮೀನನ್ನು ಶಾಂತಕುಮಾರ್ ಬಿನ್ ಬೈರಪ್ಪ, ಮಧುರೆ ಗ್ರಾಮ ರವರು ಒತ್ತುವರಿ ಮಾಡಿಕೊಂಡು ಬೌಂಡರಿ ಕಲ್ಲುಗಳನ್ನು ಒಡೆದು ಹಾಕಿರುವುದಾಗಿ, ಆದ್ದರಿಂದ ದಿನಾಂಕ 06.09.2014 ರಂದು ತಾನು ತಹಶೀಲ್ದಾರ್ ರವರಿಗೆ ಒತ್ತುವರಿಯನ್ನು ತೆರವುಗೊಳಿಸಲು ಮನವಿ ಸಲ್ಲಿಸಿದ್ದು, ಆದರೆ ಆಪಾದಿತ ಸರ್ಕಾರಿ ನೌಕರರುಗಳು ಯಾವುದೇ ಕ್ರಮಕೈಗೊಂಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

14) ದೂರುದಾರ ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ನಂತರ ತಾನು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ರವರಿಗೆ ಮನವಿ ಪತ್ರ ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳು ಆಪಾದಿತ ಸರ್ಕಾರಿ ನೌಕರರುಗಳಿಗೆ ಕ್ರಮಕೈಗೊಳ್ಳು ಸೂಚಿಸಿದ್ದು, ಆದರೂ ಸಹ ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಮತ್ತೆ ಮತ್ತೊಂದು ಮನವಿಯನ್ನು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ರವರಿಗೆ ಸಲ್ಲಿಸಿದ್ದರೂ ಸಹ ಆಗಲೂ ಸಹ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲ ನಾನು ಇನ್ನೂ ಮೇಲಾಧಿಕಾರಿಗಳಿಗೂ ಮನವಿ ಅರ್ಜಿಯನ್ನು ನೀಡಿರುತ್ತೇನೆ. ಶ್ರೀ ಶಾಂತಕುಮಾರ್ ರವರು ಸದರಿ ಸರ್ಕಾರಿ ಜಾಗದಲ್ಲಿ ಜಾನುವಾರುಗಳ ಮೇವಿನ ಬಣವೆ ಹಾಗೂ ತಿಪ್ಪೆ ಗೊಬ್ಬರದ ಸಂಗ್ರಹಣೆ ಮಾಡಿ ಸುತ್ತಲೂ ತಂತಿಬೇಲಿ ಹಾಕಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

15) ದೂರುದಾರ ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಆಪಾದಿತ ಸರ್ಕಾರಿ ನೌಕರರುಗಳು ಅತಿಕ್ರಮಣವನ್ನು ತೆರವುಗೊಳಿಸಲಾಗಿದೆಯೆಂದು ಸುಳ್ಳು ವರದಿಯನ್ನು ಸಲ್ಲಿಸಿರುತ್ತಾರೆಂದು, ಆದುದರಿಂದ ತಾನು ದೂರು, ಪ್ರಪತ್ರ-1 (ದೂರು), ಪ್ರಪತ್ರ-2 (ಅಫಿಡೆವಿಟ್) ಲೋಕಾಯುಕ್ತಕ್ಕೆ **ನಿ.ಪಿ-1 ರಿಂದ 3** ರಂತೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ತಾನು ದಿನಾಂಕ 05/09/2014 ರಂದು ತಹಶೀಲ್ದಾರ್ ರವರಿಗೆ ನೀಡಿರುವ ಮನವಿ ಪತ್ರದ ಪ್ರತಿ **ನಿ.ಪಿ-4** ಎಂದು, ಆರ್.ಟಿ.ಸಿ. ಪ್ರತಿಗಳು **ನಿ.ಪಿ-5 ಮತ್ತು 6** ಎಂದು, ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು ರವರು ದಿನಾಂಕ 8/1/2015 ರಂದು ದೂರುದಾರರಿಗೆ ನೀಡಿರುವ ಹಿಂಬರಹದ ಪ್ರತಿ **ನಿ.ಪಿ-7** ಎಂದು, ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು ರವರು ದಿನಬಾಂಕ 25/01/2016 ರಂದು ದೂರುದಾರ ಶ್ರೀ ಜಗದೀಶಯ್ಯ ರವರಿಗೆ ನೀಡಿರುವ ಹಿಂಬರಹದ ಪ್ರತಿ **ನಿ.ಪಿ-8** ಎಂದು, ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ರವರು ದಿನಾಂಕ 02/01/2015 ರಂದು ತಹಶೀಲ್ದಾರ್, ಹೊಸದುರ್ಗ ರವರಿಗೆ ದೂರುದಾರರ ಮನವಿಗೆ ನಿಯಮಾನುಸಾರ ಕ್ರಮಕೈಗೊಳ್ಳಲು ಸೂಚಿಸಿರುವ ಪತ್ರದ ಪ್ರತಿ **ನಿ.ಪಿ-9** ಎಂದು, ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ,

ಬೆಂಗಳೂರು ರವರ ಪತ್ರ ದಿನಾಂಕ 23/06/2016 ರಂದು ತಹಶೀಲ್ದಾರ್, ಹೊಸದುರ್ಗ ರವರಿಗೆ ಪತ್ರ ಬರೆದು ದೂರುದಾರರ ಮನವಿಗೆ ನಿಯಮಾನುಸಾರ ಕ್ರಮಕೈಗೊಳ್ಳಲು ಸೂಚಿಸಿರುವ ಪತ್ರದ ಪ್ರತಿ **ನಿ.ಪಿ–10** ಎಂದು, ದೂರುದಾರರ ದಿನಾಂಕ 19/10/2016 ರ ಪ್ರತ್ಯುತ್ತರ **ನಿ.ಪಿ–11** ಮತ್ತು ಮಹಜರ್‌ನ ಪ್ರತಿಗಳನ್ನು **ನಿ.ಪಿ–12** ಎಂದು ಗುರುತು ಮಾಡಲಾಗಿರುತ್ತದೆ. ಆಪಾದಿತ ಸರ್ಕಾರಿ ನೌಕರ–1 ರಿಂದ 3 ರವರುಗಳು ದೂರುದಾರರ ಮನವಿಗೆ ಯಾವುದೇ ಕ್ರಮಕೈಗೊಳ್ಳದೆ ದುರ್ನಡತೆ ಎಸಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

16) **ಡಿಡಬ್ಲ್ಯೂ–1 (ಆ.ಸ.ನೌ–1) ಶ್ರೀ ಮಲ್ಲಿಕಾರ್ಜುನಪ್ಪ, ತಹಶೀಲ್ದಾರ್** ರವರು **ತಮ್ಮ ಸಾಕ್ಷ್ಯದಲ್ಲಿ,** ದೂರುದಾರರಾದ ಎಂ.ಎಸ್. ಜಗದೀಶಯ್ಯ, ಬಿನ್ ಸಿದ್ದಬಸಯ್ಯ, ಮದುರ್ರೆ ಗ್ರಾಮ ಕಸಬಾ ಹೋಬಳಿ, ಹೊಸದುರ್ಗ ತಾಲ್ಲೂಕು ಇವರು ದಿ: 9/9/2009 ರಂದು ನನ್ನ ಛೇಂಬರ್‌ಗೆ ಬಂದು ತಾನು ಮಧುರ್ರೆ ನಂ. 63 ವಿಸ್ತೀರ್ಣ 5 ಗುಂಟೆ ಜಮೀನನ್ನು ಯಾರೋ ಅನಾಮದೇಯ ವ್ಯಕ್ತಿ ಅತಿಕ್ರಮಣ ಮಾಡಿ ಉಪಯೋಗಿಸಿತಿದ್ದಾರೆ ಅದನ್ನು ತೆರವುಗೊಳಿಸಿ ಸಾರ್ವಜನಿಕ ಉಪಯೋಗಕ್ಕಾಗಿ ಅನುಕೂಲ ಮಾಡಿಕೊಡಬೇಕಾಗಿ ಅರ್ಜಿ ಕೊಟ್ಟಿರುತ್ತಾರೆ. ಈ ಹಿಂದೆ ತಾನು ಅರ್ಜಿ ಕೊಟ್ಟಿದ್ದರು ಸಹ ತೆರವುಗೊಳಿಸಿರುವುದಿಲ್ಲ. ಆ.ಸ.ನೌ–2 & 3 ರವರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಸಹ ತೆರವುಗೊಳಿಸಿರುವುದಿಲ್ಲ. ಅದರಂತೆ ತಾನು 22/9/2016 ರಂದು ಭೂಮಿ ಶಾಖೆ ಶಿಸಿರಸ್ತೆದಾರರ ಆದ ಆರ್. ಜಯಣ್ಣ, ಕಂದಾಯ ನಿರೀಕ್ಷಕಾರಾದ ಜಿ. ಚಂದ್ರಪ್ಪ, ತಾಲ್ಲೂಕು ಸರ್ವೆಯರ್ ಶ್ರೀ ಕರಿಯಪ್ಪ ಹಾಗೂ ಮಧುರ್ರೆ ಗ್ರಾ.ಲೇ ವೃತ್ತದ ಆರ್. ಸುರೇಂದ್ರ ನಾಯ್ಕ ಇವರೊಂದಿಗೆ ಸ್ಥಳಕ್ಕೆ ಹೋಗಿ ದೂರುದಾರರ ಸಮ್ಮುಖದಲ್ಲಿಯೇ ಸ್ಥಳದಲ್ಲಿದ್ದ ತಿಪ್ಪೆ ಗುಂಡಿಯ ಕೊಟ್ಟಿಗೆ ಗೊಬ್ಬರವನ್ನು ತೆರವುಗೊಳಿಸಿ ನಿಯಮಾನುಸಾರ ಅತಿಕ್ರಮ ಪ್ರವೇಶವನ್ನು ನಿಬಂಧಿಸಲಾಗಿದೆ ಎಂಬ ನಾಮಫಲಕವನ್ನು ವಿವಾದಿತ ಸ್ಥಳದಲ್ಲಿ ಸ್ಥಾಪಿಸಿ ಗ್ರಾಮ ಮಹಜರ್ ಮಾಡಿ ಅತಿಕ್ರಮದಾರರ ಹೇಳಿಕೆ ಪಡೆದು ನಿಯಮಾನುಸಾರ ಕ್ರಮ ವಹಿಸಲಾಗಿರುತ್ತದೆ. ಯಥಾ ವರದಿಯನ್ನು ಸಹ ಗೌರವಾನ್ವಿತ ಲೋಕಾಯುಕ್ತ, ಬೆಂಗಳೂರು ರವರಿಗೆ ದಿ: 22/9/2016ರಂದು ಸಲ್ಲಿಸಲಾಗಿರುತ್ತದೆಂದು ನುಡಿದಿರುತ್ತಾರೆ.

17) ಡಿಡಬ್ಲ್ಯೂ–2 ಶ್ರೀ ಟಿ. ಕರಿಯಪ್ಪ, ತಾಲ್ಲೂಕು ಸರ್ವೆಯರ್ ರವರು ತಮ್ಮ ಸಾಕ್ಷ್ಯದಲ್ಲಿ, ತಹಶೀಲ್ದಾರ್ ಹೊಸದುರ್ಗ ರವರ ಆದೇಶದಂತೆ ದಿ: 22/9/2016ರಂದು ಆ.ಸ.ನೌ–3, ಆ.ಸ.ನೌ–1,ಗ್ರಾಮ ಲೆಕ್ಕಾಧಿಕಾರಿ, ಮಧುರೆ ರವರೊಂದಿಗೆ ಸ್ಥಳಕ್ಕೆ ಹಾಜರಾಗಿ, ಸರ್ವೆ ಕಾರ್ಯ ನಡೆಸಿ, 5 ಗುಂಟೆ ವಿಸ್ತೀರ್ಣವನ್ನು

ಗುರುತಿಸಲಾಗಿರುತ್ತದೆ. ಸದರಿ ಸ್ಥಳದ ಅಳತೆ ಕಾರ್ಯ ಕೈಗೊಳ್ಳುವುದು ಮಾತ್ರ ನನ್ನ ಕರ್ತವ್ಯವಾಗಿರುತ್ತದೆ. ಅದನ್ನು ತೆರವುಗೊಳಿಸುವ ಅಧಿಕಾರ ನನಗೆ ಇರುವುದಿಲ್ಲ. ಅಳತೆ ಮಾಡಿದ ನಂತರ ರೀ.ಸರ್ವೆ ನಂ. 63ಕ್ಕೆ ಸಂಬಂಧಿಸಿದ ನಕ್ಷೆಯನ್ನು ತಯಾರಿಸಿ ಕಛೇರಿಗೆ ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನೀಡಿರುತ್ತಾರೆ.

18) **ಡಿಡಬ್ಲ್ಯೂ-3 ಶ್ರೀ ಚಂದ್ರಪ್ಪ, ರಾಜಸ್ವ ನಿರೀಕ್ಷಕರವರು ತಮ್ಮ ಸಾಕ್ಷ್ಯದಲ್ಲಿ,** ದೂರುದಾರರ ಅರ್ಜಿಯು ಮುಂದಿನ ಕ್ರಮಕ್ಕಾಗಿ ತಹಶೀಲ್ದಾರ್ ಕಛೇರಿಯಿಂದ ನೀಡಿದ್ದು, ನಾನು ಗ್ರಾಮ ಲೆಕ್ಕಾಧಿಕಾರಿ & ಅ.ಸ.ನೌ-2 ಹೋಗಿ ಸ್ಥಳ ಭೇಟಿ ಕೊಟ್ಟು, ಸ್ಥಳ ಪರಿಶೀಲನೆ ಮಾಡಿ, ಆ.ಸ.ನೌ-2 ರವರು ಸ್ಥಳವನ್ನು ಗುರುತಿಸಿ ಕೊಟ್ಟಿರುತ್ತಾರೆ. ನಂತರ ಸ್ಥಳಕ್ಕೆ ದೂರುದಾರರನ್ನು ಹಾಗೂ ಒತ್ತುವರಿದಾರರನ್ನು ಕರೆಯಿಸಿ ಅವರ ಸಮಕ್ಷಮ ಬಣಿವೆ ಹಾಗೂ ತಿಪ್ಪೆಗುಂಡಿ ಹಾಗೂ ಅಲ್ಲಿ ಹಾಕಿದಂತಹ ತಂತಿ ಬೇಲಿಯನ್ನು ತೆರವುಗೊಳಿಸಿ ದೂರುದಾರರು ಮತ್ತು ಒತ್ತುವರಿದಾರರ ಗ್ರಾಮಸ್ಥರ ಸಮಕ್ಷಮ ಮಹಜರ್ ಮಾಡಿ, ಒತ್ತುವರಿಯನ್ನು ತೆರವುಗೊಳಿಸಿದ ಬಗ್ಗೆ ಸ್ಥಳ ಮಹಜರ್ ಮಾಡಿ ಫೋಟೋಗಳನ್ನು ತೆಗೆದಿರುತ್ತೇವೆ. ನಂತರ ಈ ಬಗ್ಗೆ ವರದಿಯೊಂದಿಗೆ ಮಹಜರ್ & ಫೋಟೋಗಳನ್ನು ಮೇಲಾಧಿಕಾರಿಗಳಾದ ತಹಶೀಲ್ದಾರ್ ಕಚೇರಿಗೆ ಕಳುಹಿಸಿಕೊಟ್ಟಿರುತ್ತೇವೆಂದು ಸಾಕ್ಷ್ಯ ನುಡಿದಿರುತ್ತಾರೆ.

19) **ಪಿ.ಡಬ್ಲ್ಯೂ-1 ರವರ ಸಾಕ್ಷ್ಯ ನಿ.ಪಿ-1 ರಿಂದ ನಿ.ಪಿ-12 ರ ದಾಖಲಾತಿಗಳು, ಡಿ.ಡಬ್ಲ್ಯೂ-1 ರಿಂದ 3 ರವರುಗಳ ಸಾಕ್ಷ್ಯ ನಿ.ಡಿ-1 ರಿಂದ ನಿ.ಡಿ-4 ರ ದಾಖಲಾತಿಗಳು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಾಗಿ,** ಪಿಡಬ್ಲ್ಯೂ-1 ದೂರುದಾರರು ತಮ್ಮ ಸಾಕ್ಷ್ಯದಲ್ಲಿ, ಮಧುರೆ ಗ್ರಾಮದ ರಿ. ಸರ್ವೆ ನಂ. 63 ರಲ್ಲಿ 5 ಗುಂಟೆ ಜಮೀನು ಸರ್ಕಾರಿ ಬಂಜರು ಜಮೀನು ಇದ್ದು, ಸದರಿ ಜಮೀನನ್ನು ಶಾಂತಕುಮಾರ್ ಬಿನ್ ಬೈರಪ್ಪ, ಮಧುರೆ ಗ್ರಾಮ ರವರು ಒತ್ತುವರಿ ಮಾಡಿಕೊಂಡು ಬೌಂಡರಿ ಕಲ್ಲುಗಳನ್ನು ಒಡೆದು ಹಾಕಿರುವುದಾಗಿ, ಆದ್ದರಿಂದ ದಿನಾಂಕ 06.09.2014 ರಂದು ತಾನು ತಹಶೀಲ್ದಾರ್ ರವರಿಗೆ ಒತ್ತುವರಿಯನ್ನು ತೆರವುಗೊಳಿಸಲು ಮನವಿ ಸಲ್ಲಿಸಿದ್ದು, ಆದರೆ ಆಪಾದಿತ ಸರ್ಕಾರಿ ನೌಕರರುಗಳು ಯಾವುದೇ ಕ್ರಮಕೈಗೊಂಡಿಲ್ಲವೆಂದು, ನಂತರ ತಾನು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ರವರಿಗೆ ಮನವಿ ಪತ್ರ ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳು ಆಪಾದಿತ ಸರ್ಕಾರಿ ನೌಕರರುಗಳಿಗೆ ಕ್ರಮಕೈಗೊಳ್ಳ ಸೂಚಿಸಿದ್ದು, ಆದರೂ ಸಹ ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮಕೈಗೊಂಡಿರುವುದಿಲ್ಲ, ಮತ್ತೆ ಮತ್ತೊಂದು ಮನವಿಯನ್ನು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ರವರಿಗೆ ಸಲ್ಲಿಸಿದ್ದರೂ ಸಹ ಆಗಲೂ ಸಹ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲ ನಾನು ಇನ್ನೂ ಮೇಲಾಧಿಕಾರಿಗಳಿಗೂ ಮನವಿ ಅರ್ಜಿಯನ್ನು ನೀಡಿರುತ್ತೇನೆ. ಶ್ರೀ

ಶಾಂತಕುಮಾರ್ ರವರು ಸದರಿ ಸರ್ಕಾರಿ ಜಾಗದಲ್ಲಿ ಜಾನುವಾರುಗಳ ಮೇವಿನ ಬಣವೆ ಹಾಗೂ ತಿಪ್ಪೆ ಗೊಬ್ಬರದ ಸಂಗ್ರಹಣೆ ಮಾಡಿ ಸುತ್ತಲೂ ತಂತಿಬೇಲಿ ಹಾಕಿರುವುದಾಗಿ ಹಾಗೂ ತಂತಿ ಬೇಲಿಯನ್ನು ತೆರವುಗೊಳಿಸಿರುವುದಾಗಿ ಸುಳ್ಳು ವರದಿಯನ್ನು ಸಲ್ಲಿಸಿರುವುದರಿಂದ, ತಾನು **ನಿ.ಪಿ-1 ರಿಂದ 3** ರಂತೆ ಲೋಕಾಯುಕ್ತ ಕಛೇರಿಗೆ ದೂರು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

20) ದಾಖಲಾತಿಗಳನ್ನು ಪರಿಶೀಲಿಸಲಾಗಿ ದೂರುದಾರರು **ನಿ.ಪಿ-4** ರ ಪತ್ರದಲ್ಲಿ ಶ್ರೀ ಶಾಂತಕುಮಾರ್ ಎಂಬುವರು ಮಧುರೆ ಗ್ರಾಮ ರಿ.ಸರ್ವೆ ನಂ. 63 ರ ವಿಸ್ತೀರ್ಣ 0-05 ಗುಂಟೆ ಪ್ರದೇಶ ಸರ್ಕಾರಿ ಬಂಜರು ಭೂಮಿಯಾಗಿದ್ದು ಅಳತೆ ಕಲ್ಲನ್ನು ಕಿತ್ತು ಎಸೆದು ಅಕ್ರಮಿಸಿಕೊಂಡಿದ್ದು, ಆದ್ದರಿಂದ ಹದ್ದುಬಸ್ತು ನಿಗದಿಪಡಿಸಿ ಅಕ್ರಮದಾರರನ್ನು ಸದರಿ ಪ್ರದೇಶದಿಂದ ತೆರವುಗೊಳಿಸಲು **ದಿನಾಂಕ 06/09/2014** ರಂದು ಆಪಾದಿತ ಸರ್ಕಾರಿ ನೌಕರ-1 ತಹಶೀಲ್ದಾರ್ **ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುವುದು ಕಂಡು ಬರುತ್ತದೆ.** ನಂತರ ದೂರುದಾರರು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ರವರಿಗೂ 2 ಬಾರಿ ಹಾಗೂ ಹಿರಿಯ ಅಧಿಕಾರಿಗಳಿಗೂ ಮನವಿ ಪತ್ರ ಸಲ್ಲಿಸಿದ್ದು, **ನಿ.ಪಿ-9** ರಂತೆ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ರವರು ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು ರವರಿಗೆ ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲು ಸೂಚಿಸಿರುವುದು ಕಂಡು ಬರುತ್ತದೆ. ಆಪಾದಿತ ಸರ್ಕಾರಿ ನೌಕರ-1 (ಡಿಡಬ್ಲ್ಯೂ-1) ರವರು ತಮ್ಮ ಸಾಕ್ಷ್ಯದಲ್ಲಿ **ದಿನಾಂಕ 22/09/2016 ರಂದು ಸ್ಥಳ ಪರಿಶೀಲನೆ ಮಾಡಿ ಅತಿಕ್ರಮ ತೆರವುಗೊಳಿಸಲಾಗಿದೆಯೆಂದು ಸಾಕ್ಷ್ಯ ನೀಡಿರುವುದು ಕಂಡುಬರುತ್ತದೆ.** ದೂರುದಾರರು ಮಧುರೆ ಗ್ರಾಮದ ರಿ.ಸರ್ವೆ ನಂ. 63 ರ ವಿಸ್ತೀರ್ಣ 0-05 ಗುಂಟೆ ಪ್ರದೇಶ ಸರ್ಕಾರಿ ಬಂಜರು ಭೂಮಿಯನ್ನು ಕಲ್ಲನ್ನು ಕಿತ್ತು ಎಸೆದು ಅಕ್ರಮಿಸಿಕೊಂಡಿದ್ದು ಹದ್ದುಬಸ್ತು ನಿಗದಿಪಡಿಸಿ ಅಕ್ರಮದಾರರನ್ನು ಸದರಿ ಪ್ರದೇಶದಿಂದ ತೆರವುಗೊಳಿಸಲು **ದಿನಾಂಕ 06/09/2014** ರಂದು ಮನವಿ ಪತ್ರ ಸಲ್ಲಿಸಿದ್ದರೂ, ಮೇಲಾಧಿಕಾರಿಗಳು ಸೂಕ್ತ ಸೂಚನೆ ನೀಡಿದರೂ ಸಹ **ಸುಮಾರು 2 ವರ್ಷಗಳವರೆಗೆ ಯಾವುದೇ** ಕಾನೂನು ರೀತ್ಯಾ ಕ್ರಮಕೈಗೊಳ್ಳದೆ, ಹಾಗೂ ಬಾಂದುಗಳನ್ನು ಕಿತ್ತು ಹಾಕಿದವರ ಮೇಲೆ ಯಾವುದೇ ಕಾನೂನು ಕ್ರಮಕೈಗೊಂಡಿರುವುದು ಕಂಡುಬಂದಿರುವುದಿಲ್ಲ.

21) ಆಪಾದಿತ ಸರ್ಕಾರಿ ನೌಕರ-3 ಶ್ರೀ ಚಂದ್ರಪ್ಪ ರಾಜಸ್ವ ನಿರೀಕ್ಷಕರು ದಿನಾಂಕ 22.03.2016 ರಂದು ಸದರಿ ಜಮೀನು ಖುಲ್ಲಾಪಡಿಸದೆ ಇದ್ದರೂ ಸಹ ಖುಲ್ಲಾಪಡಿಸಲಾಗಿದೆ ಎಂದು ಸುಳ್ಳು ವರದಿಯನ್ನು ನೀಡಿ ದುರ್ನಡತೆ ಎಸಗಿರುವುದನ್ನು ಶಿಸ್ತು ಪ್ರಾಧಿಕಾರಿಗಳು ಸಾಬೀತುಪಡಿಸುವಲ್ಲಿ ಸಫಲರಾಗಿರುತ್ತಾರೆ.

22) ಆಪಾದಿತ ಸರ್ಕಾರಿ ನೌಕರ-2/ಡಿಡಬ್ಲ್ಯೂ-2 ರವರು ತಮ್ಮ ಸಾಕ್ಷ್ಯದಲ್ಲಿ ತಹಶೀಲ್ದಾರ್ ಹೊಸದುರ್ಗ ರವರ ಆದೇಶದಂತೆ ತಾನು ದಿ: 22/9/2016ರಂದು ಆ.ಸ.ನೌ-3, ಆ.ಸ.ನೌ-1, ಗ್ರಾಮ ಲೆಕ್ಕಾಧಿಕಾರಿ, ಮಧುರೆ ರವರೊಂದಿಗೆ ಸ್ಥಳಕ್ಕೆ ಹಾಜರಾಗಿ, ಸರ್ವೆ ಕಾರ್ಯ ನಡೆಸಿ, 5 ಗುಂಟೆ ವಿಸ್ತೀರ್ಣವನ್ನು ಗುರುತಿಸಿಕೊಟ್ಟಿರುವುದಾಗಿ ಹಾಗೂ ನಕ್ಷೆಯನ್ನು ತಯಾರಿಸಿ ಕೊಟ್ಟಿರುವುದಾಗಿ, ಒತ್ತುವರಿ ತೆರವುಗೊಳಿಸುವ ಅಧಿಕಾರ ತನಗೆ ಇರುವುದಿಲ್ಲವೆಂದು ಸಾಕ್ಷ್ಯ ನುಡಿದಿರುವುದರಿಂದ, ಆ.ಸ.ನೌ-2 ರವರು ತಹಶೀಲ್ದಾರ್ ಆದೇಶದಂತೆ ಸ್ಥಳ ಗುರುತಿಸಿಕೊಟ್ಟು, ನಕ್ಷೆ ತಯಾರಿಸಿಕೊಟ್ಟಿದ್ದು, ಅವರಿಗೆ ಒತ್ತುವರಿ ತೆರವುಗೊಳಿಸುವ ಯಾವುದೇ ಅಧಿಕಾರ ಇರುವುದಿಲ್ಲ, ಆದ್ದರಿಂದ ಆಪಾದಿತ ಸರ್ಕಾರಿ ನೌಕರ-2 ರವರ ವಿರುದ್ಧ ದೋಷಾರೋಪಣೆಯಲ್ಲಿನ ಆಪಾದನೆಯನ್ನು ಶಿಸ್ತು ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತಾರೆ.

23) ಈ ಎಲ್ಲಾ ಕಾರಣಗಳಿಂದ ಆ.ಸ.ನೌ-1 ಮತ್ತು 3 ರವರುಗಳು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ **ಅಂಶ-1 ಕ್ಕೆ ಭಾಗಶ: ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

24) **ಆಪಾದಿತ ಸರ್ಕಾರಿ ನೌಕರ-2 ಶ್ರೀ ಕರಿಯಪ್ಪ, ತಾಲ್ಲೂಕು ಸರ್ವೆಯರ್, ತಾಲ್ಲೂಕು, ಕಛೇರಿ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ರವರ ವಿರುದ್ಧದ ಆಪಾದನೆಯನ್ನು ಶಿಸ್ತು ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತಾರೆ.**

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು **ಆಪಾದಿತ ಸರ್ಕಾರಿ ನೌಕರ-1 ಶ್ರೀ ಮಲ್ಲಿಕಾರ್ಜುನಪ್ಪ,** ತಹಶೀಲ್ದಾರ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಮತ್ತು **ಆಪಾದಿತ ಸರ್ಕಾರಿ ನೌಕರ-3 ಶ್ರೀ ಚಂದ್ರಪ್ಪ,** ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರುಗಳ ವಿರುದ್ಧ ಹೊರಿಸಲಾದ ಆರೋಪವನ್ನು **ರುಜುವಾತುಪಡಿಸಲಾಗಿದೆ** ಹಾಗೂ **ಆಪಾದಿತ ಸರ್ಕಾರಿ ನೌಕರ-2 ಶ್ರೀ ಕರಿಯಪ್ಪ,** ತಾಲ್ಲೂಕು ಸರ್ವೆಯರ್, ತಾಲ್ಲೂಕು ಕಛೇರಿ, ಹೊಸದುರ್ಗ ತಾಲ್ಲೂಕು, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಲು **ವಿಫಲವಾಗಿರುತ್ತದೆ** ಎಂದು **ನಿರ್ಣಯಿಸಲಾಗಿದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**19ನೇ ಮಾರ್ಚಿ 2021**

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Jagadeeshaiah (Complainant) (original) | |
| **LIST OF WITNESS EXAMINED ON BEHALF OF DGOS :** | |
| DW-1 : Sri.Mallikarjunappa (DGO-1) (original) | |
| DW-2 : Sri. Kariyappa (DGO-2) (original) | |
| DW-3 : Sri. G. Chandrappa (DGO-3) (original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex. P-1: | Complaint of the complainant dated 04/08/2016 (original) |
| Ex.P.2 : | Form No. I (complaint) dated 01/08/2016. (original) |
| Ex.P.3 : | Form No. II (Affidavit) dated 01/08/2016 (original) |
| Ex. P-4: | Copy of the requisition given to the Tahasildar dated 05/09/2015 by the complainant. (Xerox) |
| Ex. P-5 & 6 : | Copies of RTCs (Xerox) |
| Ex. P-7: | Copy of Endorsement given by Tahasildar dated 08/01/2015 to the complainant (Xerox) |
| Ex. P-8: | Copy of another endorsements given by dated 25/01/2016 (Xerox) |
| Ex. P-9: | Copies of direction issued by Deputy Commissioner (Xerox) |
| Ex. P-10: | Copies of direction issued by Under Secretary (Xerox) |
| Ex. P-11: | Rejoinder of the complainant dated 19/10/2016 (Original) |

| | |
|---|---|
| Ex. P-12: | Certified copy of Mahazar and Reports (Xerox) |
| Ex. D-1 | Photo wherein DGOs-1 to 3 were present which is taken at the time of removal of encroachment (Original) |
| Ex. D-2 | Photo showing Thippe/heap manure was removed and board was erected by the VA (Original) |
| Ex. D-3 | Copy of statement (Xerox) |
| EX. D-4 | RTC and mutation pertaining to the said land. (Xerox) |

**19th March 2022**

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

DOR of DGO-1 is **30.06.2041**
DOR of DGO-2 is **31.08.2035**
DOR of DGO-3 is **30.06.2019 (Already Retired)**

KARNATAKA LOKAYUKTA

No.UPLOK-2/DE.689/2017/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 24.03.2022

## RECOMMENDATION

Sub:- Departmental inquiry against (1) Sri Mallikarjunappa, Tahsildar, Hosadurga Taluk, (2) Sri Kariyappa, Taluk Surveyor, Hosadurga and (3) Sri Chandrappa, Revenue Inspector, Kasaba Hobli, Hosadurga Taluk, Chitradurga District– reg.

Ref:- 1) Government Order No.RD 78 ADE 2017 dated 09.05.2017.

2) Nomination order No. UPLOK-2/DE.689/2017 dated 24.05.2017 of Hon'ble Upalokayukta, State of Karnataka.

3) Inquiry report dated 19.03.2022 of Additional Registrar of Enquiries-10, Karnataka Lokayukta, Bengaluru.

~~~~~~

The Government by its order dated 09.05.2017, initiated the disciplinary proceedings against (1) Sri Mallikarjunappa, Tahsildar, Hosadurga Taluk, (2) Sri Kariyappa, Taluk Surveyor, Hosadurga and (3) Sri Chandrappa, Revenue Inspector, Kasaba Hobli, Hosadurga Taluk, Chitradurga District, [hereinafter
~~~~~~

referred to as Delinquent Government Officials, for short as 'DGOs 1 to 3' respectively ] and entrusted the Departmental Inquiry to this Institution.

2. This Institution by Nomination Order No. UPLOK-2/DE.689/2017 dated 24.05.2017 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them.

3. The DGOs were tried for the charge of furnishing false report regarding removal of encroachment of Govt. land and thereby committed misconduct.

4. The Inquiry Officer (Additional Registrar of Enquiries-10) on proper appreciation of oral and documentary evidence has held that, the Disciplinary Authority has '*proved*' the above charge against the DGO 1 Sri Mallikarjunappa, Tahsildar, Hosadurga Taluk, and DGO 3 Sri Chandrappa, Revenue Inspector, Kasaba Hobli, Hosadurga Taluk, Chitradurga District.

5. Further, the Inquiry Officer has held that the charge against DGO 2 Sri Kariyappa, Taluk Surveyor, Hosadurga, is 'not proved.'

6. On re-consideration of report of inquiry, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and exonerate DGO 2 Sri Kariyappa, Taluk Surveyor, Hosadurga, of the charge leveled against him.

7. As per the information furnished by the Enquiry Officer,

   i) DGO-1 Sri Mallikarjunappa is due to retire from service on 30.6.2041, and
   ii) DGO-3 Sri Chandrappa, has retired from service on 30.06.2019.

8. Having regard to the nature of charge proved against DGOs 1 and 3 and considering the totality of circumstances,

   i) it is hereby recommended to the Govt. to impose penalty of 'withholding two annual increments payable to DGO 1 Sri Mallikarjunappa, with cumulative effect.'

ii) it is hereby recommended to the Govt. to impose penalty of 'withholding 10% pension payable to DGO 3 Sri Chandrappa(retired), for a period of five years.'

9. Action taken in the matter shall be intimated to this Authority.

Connected records are enclosed herewith.

Sd/- 24/3/22

**(JUSTICE B.S.PATIL)**
Upalokayukta-2,
State of Karnataka.